# ಕರ್ನಾಟಕ ವಿಧಾನ ಪರಿಷತ್ತು
## ನೂರ ಮೂವತ್ತನೆಯ ಅಧಿವೇಶನ
## ಕಾರ್ಯಕಲಾಪಗಳ ಪಟ್ಟಿ
**ಶನಿವಾರ, ದಿನಾಂಕ: 05ನೇ ಮಾರ್ಚ್, 2016**
**(ಸಮಯ: ಬೆಳಗ್ಗೆ 10.00 ಗಂಟೆಗೆ)**

******

## 01. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಶ್ರೀ ಸಿದ್ಧರಾಮಯ್ಯ** (ಮುಖ್ಯಮಂತ್ರಿಗಳು) ಅವರು:-

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಮಾರ್ಚ್ 2015ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿ (ಸಂಖ್ಯೆ: 3)ನ್ನು ಸಭೆಯ ಮುಂದಿಡುವುದು.

## 02. ವಿಶೇಷ ಜಂಟಿ ಸದನ ಸಮಿತಿ ಹಾಗೂ ವಿಶೇಷ ಸದನ ಸಮಿತಿಗಳ ಕಾಲಾವಕಾಶವನ್ನು ವಿಸ್ತರಿಸಲು ಪ್ರಸ್ತಾವ

**ಮಾನ್ಯ ಸಭಾನಾಯಕರು:-**

ಅ) ದಿನಾಂಕ: 31.12.2015ರವರೆಗೆ ವಿಸ್ತರಿಸಲಾಗಿದ್ದ "ಹೊರ ರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು" ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು **ದಿನಾಂಕ: 30ನೇ ಜೂನ್, 2016ರವರೆಗೆ** (6 ತಿಂಗಳವರೆಗೆ) ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಮಂಡಿಸುವುದು.

ಆ) ದಿನಾಂಕ: 31.12.2015ರವರೆಗೆ ವಿಸ್ತರಿಸಲಾಗಿದ್ದ, "ಭೋವಿ ಮತ್ತು ವಡ್ಡರ್ ಸಮುದಾಯಗಳ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದಿರುವ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು **ದಿನಾಂಕ: 30ನೇ ಜೂನ್, 2016ರವರೆಗೆ** (6 ತಿಂಗಳವರೆಗೆ) ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಮಂಡಿಸುವುದು.

## 03. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

"2016ನೇ ಫೆಬ್ರವರಿ, 29ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ದಿನಾಂಕ: 03.03.2016ರಂದು ಡಾ: ಮತ್ತಿಕಟ್ಟಿ ವೀರಣ್ಣರವರು ಸೂಚಿಸಿದ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

## 04. ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ.ಬಿ.ಶಾಣಪ್ಪ ಅವರು ಕರ್ನಾಟಕ ರಾಜ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ವೇತನ ಸೇವಾ ಭದ್ರತೆ ಕುರಿತು ಅರ್ಜಿಯನ್ನು ಒಪ್ಪಿಸುವುದು.

## 05. ಗಮನ ಸೆಳೆಯುವ ಸೂಚನೆಗಳು

**ಅ) ಶ್ರೀ ಐವನ್ ಡಿ'ಸೋಜಾ** ಅವರು ಮೂಲ ಗೇಣಿದಾರರಿಗೆ ಮಾಲಿ ಹಕ್ಕು ನೀಡುವ ಬಗ್ಗೆ ರಾಜ್ಯ ಸರ್ಕಾರವು ಕಾನೂನು ರಚಿಸಿದ್ದರೂ ಈ ಬಗ್ಗೆ ನಿಯಮಗಳನ್ನು ರಚಿಸದೇ ಮೂಲ ಗೇಣಿದಾರರು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ **ಮಾನ್ಯ ಕಂದಾಯ ಸಚಿವರ** ಗಮನ ಸೆಳೆಯುವುದು.

**ಆ) ಶ್ರೀ ರಾಮಚಂದ್ರ ಗೌಡ** ಅವರು ಆರ್ಥಿಕವಾಗಿ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿರುವ ನೇಕಾರ ಜನಾಂಗದ ಸಮೂಹವನ್ನು ಎಲ್ಲಾ ಸ್ಥರಗಳಲ್ಲಿಯೂ ಮೇಲೆತ್ತುವ ಕುರಿತು **ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ** ಗಮನ ಸೆಳೆಯುವುದು.

**ಇ) ಶ್ರೀ ಪುಟ್ಟಣ್ಣ** ಅವರು ರಾಜ್ಯದ ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಕೆಲಸ ಮಾಡುವ ಅಧ್ಯಾಪಕರು ವೈದ್ಯಕೀಯ ಭತ್ಯೆಯ ಸವಲತ್ತಿನಿಂದ ವಂಚಿತರಾಗಿರುವ ಬಗ್ಗೆ **ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ** ಗಮನ ಸೆಳೆಯುವುದು.

## 06. ನಿಯಮ 330ರ ಮೇರೆಗೆ

**ಅ) ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಅವರು ದಕ್ಷಿಣ ಕನ್ನಡ ಜಿಲ್ಲೆಯ ಜೀವ ನದಿಗಳಾದ ನೇತ್ರಾವತಿ ಹಾಗೂ ಕುಮಾರಧಾರ ನದಿಯ ಉಪನದಿಯಾದ ಎತ್ತಿನ ಹೊಳೆಯ ನೀರನ್ನು ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಕೈಗೆತ್ತಿಕೊಂಡಿರುವ "ಎತ್ತಿನ ಹೊಳೆ" ಯೋಜನೆಯು ಅವೈಜ್ಞಾನಿಕವಾಗಿದ್ದು, ಇದರಿಂದಾಗಿ ಪರಿಸರದ ಮೇಲಾಗುವ ಪರಿಣಾಮಗಳು ಹಾಗೂ ಈ ಯೋಜನೆಯ ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)**

**ಆ) ಶ್ರೀ ವಿ.ಎಸ್. ಉಗ್ರಪ್ಪ** ಅವರು ರಾಜ್ಯದಲ್ಲಿ ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಇರುವ ಸಾಧಕ-ಬಾಧಕಗಳ ಕುರಿತು ಪ್ರಸ್ತಾಪಿಸುವುದು. **(ಮಾನ್ಯ ಇಂಧನ ಸಚಿವರು)**

**ವಿ. ಶ್ರೀಶ್**
**ಕಾರ್ಯದರ್ಶಿ**

---